(x) ಬಂಟ್ವಾಳ ತಾಲ್ಲೂಕಿನ ತುಂಬೆಯಲ್ಲಿರುವ ಬೀಡಿ ಕಾರ್ಮಿಕರ ಚಿಕಿತ್ಸಾಲಯದಲ್ಲಿ ದಾದಿಯೊಬ್ಬಳ ನಿರ್ಲಕ್ಷ್ಯತನದಿಂದ ಒಬ್ಬ ರೋಗಿ ಮರಣ ಹೊಂದಿದ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ.—ಅಧ್ಯಕ್ಷರೆ, ಬಂಟ್ವಾಳ ತಾಲ್ಲೂಕಿನ ತುಂಬೆಯಲ್ಲಿರುವ ಬೀಡಿ ಕಾರ್ಮಿಕರ ಚಿಕಿತ್ಸಾಲಯದಲ್ಲಿ ತಾರೀಖು ೫-೧-೮೪ರ ಗುರುವಾರದಂದು ಅಲ್ಲಿಯ ದಾದಿ ಇಂಜೆಕ್ಷನ್ ಕೊಟ್ಟು ತಕ್ಷಣವೆ ವೆಂಕಪ್ಪ ಪೂಜಾರಿ ಎಂಬುವರು ಸಾವನ್ನಪ್ಪಿದರು. ಡಾಕ್ಟರ್‌ರವರು ಸರಿಯಾಗಿ ಪರೀಕ್ಷೆ ಮಾಡಿ ಇಂಜೆಕ್ಷನ್ ಕೊಡುವಂತೆ ದಾದಿಯವರಲ್ಲಿ ಬರೆದುಕೊಟ್ಟರೆಂದೂ ದಾದಿ ಇಂಜೆಕ್ಷನ್ ಕೊಡುತ್ತಿರುವಾಗಲೇ ಮರಣಾಂತಿಕತಕನಾಗಿ ಬೊಬ್ಬಿಟ್ಟ ವೆಂಕಟಪ್ಪ ಪೂಜಾರಿಯವರು ಒಂದೆರಡು ಕ್ಷಣದಲ್ಲೇ ಕುಸಿದು ಬಿದ್ದು ಮರಣ ಹೊಂದಿದರೆಂದೂ ಅಲ್ಲಿಗೆ ಮದ್ದಿಗೆ ಹೋದವರು ಪ್ರತ್ಯಕ್ಷವಾಗಿ ಕಂಡದ್ದನ್ನು ಹೇಳುತ್ತಿದ್ದಾರೆ.

ಈ ಮರಣ ಸ್ವಾಭಾವಿಕವಾಗಿ ಆಗದೆ ದಾದಿಯರ ನಿರ್ಲಕ್ಷ್ಯದಿಂದ ಆದದ್ದೆಂದು ಮನಗಂಡ ಊರವರು ಇದನ್ನು ತನಿಖೆ ಮಾಡಬೇಕೆಂದು ವೆಲ್‌ಫೇರ್ ಆಫೀಸರ್, ಬೆಂಗಳೂರು ಇವರಿಗೆ ಮನವಿ ಸಲ್ಲಿಸಿದ್ದರೂ ಇದರ ಬಗ್ಗೆ ಯಾವುದೇ ಸೂಕ್ತ ತನಿಖೆ ನಡೆಸಿಲ್ಲವೆಂದು ಊರವರು ದೂರುತ್ತಿದ್ದಾರೆ. ಅದೂ ಅಲ್ಲದೆ ಈಗ ಆ ಚಿಕಿತ್ಸಾಲಯಕ್ಕೆ ಮದ್ದಿಗಾಗಿ ಹೋಗುವವರ ಸಂಖ್ಯೆ ಕೂಡ ಬಹಳ ಕಡಿಮೆಯಾಗಿದೆ. ಆದುದರಿಂದ ತಾವು ಈ ಬಗ್ಗೆ ಸೂಕ್ತ ತನಿಖೆ ಮಾಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇನ್ನು ಮುಂದೆ ಇಂತಹ ಅವ್ಯವಸ್ಥೆಗಳು ಆಗದಂತೆ ಸರಕಾರ ಎಚ್ಚರ ವಹಿಸಬೇಕೆಂದು ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ವರದಿ ತರಿಸುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ತೀರಿಕೊಂಡವರು ಬಡವರು. ಆದು ಪೆನ್ಸಿಲಿನ್ ಅಥವಾ ಬೇರೆ ಡ್ರಗ್‌ನ ರಿಯಾಕ್ಷನ್ ಇರಬಹುದು. ಆದರೆ ರಿಯಾಕ್ಷನ್ ಬಗ್ಗೆ ಏನೂ ಪ್ರಯತ್ನ ಮಾಡಿಲ್ಲ. ಅದಕ್ಕೆ ಅವಕಾಶವೂ ಇರಲಿಲ್ಲ. ಇಂಥ ಸಂದರ್ಭಗಳಲ್ಲಿ ಏನು ಮಾಡಬೇಕೆಂದು ಹೇಳುವುದಾದರೆ ಯಾವುದೇ ತರಹದ ಆಸ್ಪತ್ರೆಯಾಗಿರಲಿ ಡ್ರಗ್ ರಿಯಾಕ್ಷನ್ ಆಗುವಂಥ ಇಂಜೆಕ್ಷನ್‌ಗಳನ್ನು ಎಲ್ಲಿಟ್ಟಾಗ ಅದರ ರೆಸಿಸಿಟೆನ್ಷನ್‌ಗೆ ಬೇಕಾದ ವ್ಯವಸ್ಥೆಯನ್ನು ಸಹ ಮಾಡಬೇಕು. ಒಡಪಾಯಿಗಳು ಸತ್ತು ಹೋದರೆ ಪರಿಹಾರ ಕೊಡುತ್ತೀರಿ ಅದು ಮುಖ್ಯವಲ್ಲ. ಆದರೆ ರೆಸಿಸಿಟೆನ್ಸ್‌ಗೆ ವ್ಯವಸ್ಥೆ ಇರಬೇಕು ಜೀವ ಉಳಿಸುವಂಥ ಮದ್ದು ಇರಬೇಕು. ಅದು ಇಲ್ಲದಿರುವುದರಿಂದ ಈ ತರಹ ತೊಂದರೆಗಳಾಗುತ್ತವೆ. ಆದ್ದರಿಂದ ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸೂಚನೆಯಲ್ಲಿರುವುದು ಬೇರೆ, ಮಾನ್ಯ ಸದಸ್ಯರು ಹೇಳಿರುವುದು ಬೇರೆ. ಆದರೂ ನಾನು ವಿಷಯ ತರಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ರಿಯಾಕ್ಷನ್ ಆಗುವ ಡ್ರಗ್‌ಗಳನ್ನು ಕೊಡುವ ಮೊದಲು ಒಂದು ನಿಮಿಷ ಪರೀಕ್ಷೆ ಮಾಡಿ ತಿಳಿದುಕೊಂಡು ನಂತರ ಕೊಡಬೇಕು. ಆ ರೀತಿ ಏತಕ್ಕೆ ಮಾಡಲಿಲ್ಲ ?

(xi) ಬೆಂಗಳೂರು ನಗರದ ಕಬ್ಬನ್ ಪೇಟೆಯ ರಿಕ್ರಿಯೇಷನ್ ಕ್ಲಬ್ ಮೇಲೆ ಪೋಲೀಸಿನವರು ದಾಳಿ ನಡೆಸಿರುವ ಬಗ್ಗೆ

ಅಧ್ಯಕ್ಷರು.—ಶ್ರೀ ಕೆ. ಶಿವಮೂರ್ತಿಯವರೆ, ರಿಕ್ರಿಯೇಷನ್ ಕ್ಲಬ್ ಬಗ್ಗೆ ನಿನ್ನೆ ದಿವಸ ರಾವ್ ದೇವ್ ಅವರು ಎತ್ತಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ನಾನು ನಿರ್ದಿಷ್ಟವಾಗಿ ಕೆಲವರ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಆಲ್ಲಿ ನಡೆದಿರತಕ್ಕ ಘಟನೆಯ ಬಗ್ಗೆ ತಮ್ಮ ಅನುಮತಿ ಮೇಲೆ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ನೋಟೀಸ್ ಓದಿ.

ಶ್ರೀ ಕೆ. ಶಿವಮೂರ್ತಿ.—ಬೆಂಗಳೂರು ನಗರದ ಕಬ್ಬನ್ ಪೇಟೆಯ ರಿಕ್ರಿಯೇಷನ್ ಕ್ಲಬ್ ಮೇಲೆ ಪೋಲೀಸರು ದಾಳಿ ನಡೆಸಿ ೯ ಜನರನ್ನು ಬಂಧಿಸಿದ್ದಾರೆ. ಈ ವಿಚಾರ ಮುಂಜಾನೆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿನ ಕ್ಲಬ್ ನಡೆಸುತ್ತಿರುವುದು ಪರ್ತಕರ ಹೆಸರಿನಲ್ಲಿ. ಆದರೆ ನಿಜವಾಗಿ ಕ್ಲಬ್ಬಿನ ಅಧ್ಯಕ್ಷರು ಆಳುವ ಪಕ್ಷದ ಅತ್ಯಂತ ವರ್ಚಸ್ಸಿನ ರಾಜಕಾರಣಿ ಎನ್ನಲಾಗಿದೆ.

ಅಧ್ಯಕ್ಷರು.—ಪ್ರತಿಯೊಂದು ವಿಚಾರಕ್ಕೂ ರಾಜಕಾರಣ ತರಬೇಡಿ.

ಶ್ರೀ ಕೆ. ಶಿವಮೂರ್ತಿ.—ದಾಳಿ ಮಾಡಿದಾಗ ಒಬ್ಬರು ಮಹಾನಗರಪಾಲಿಕೆಯ ಜನತಾ ಪಕ್ಷದ ಸದಸ್ಯರು ಸಿಕ್ಕಿದ್ದಾರೆ. ಬಂಧಿತರನ್ನು ಹಿಡಿದು ೪೫೬೧ ರೂಪಾಯಿ ಕ್ಯಾಷ್, ೪,೫೦೦ ರೂಪಾಯಿ ಮೊತ್ತದ ಟೋಕನ್, ಅಶ್ಲೀಲ ಸಾಹಿತ್ಯದ ಟೇಪ್ ರೆಕಾರ್ಡರ್, ಬ್ಲೂ ಫಿಲಂ, ವಿದೇಶಿ ಮದ್ಯದ ಬಾಟಲ್‌ಗಳು ಇವುಗಳನ್ನೆಲ್ಲಾ ವಶಪಡಿಸಿಕೊಂಡಿದ್ದಾರೆ. ಒಬ್ಬರು ಕ್ಯಾಬಿನೇಟ್ ದರ್ಜೆ ಮಂತ್ರಿಗಳು ಫೋನ್ ಮಾಡಿ ಕೇಸ್ ಹಾಕಬೇಡಿ, ಬಿಟ್ಟುಬಿಡಿ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಹಿಡಿದಿದ್ದಾರಲ್ಲ, ಅದಕ್ಕೆ ಸಂತೋಷಪಡಿ. ಉತ್ತರ ಏತಕ್ಕೆ ?

ಶ್ರೀ ಕೆ. ಶಿವಮೂರ್ತಿ.—ಕ್ಲಬ್ಬನ್ನು ನಡೆಸುತ್ತಿರುವವರು ಯಾರು ಮತ್ತು ಅದಕ್ಕೆ ಪ್ರೋತ್ಸಾಹ ನೀಡುತ್ತಿರುವವರು ಯಾರು ಎಂಬುದನ್ನು ನೋಡಬೇಕು. ಜನತಾ ಪಕ್ಷದ ಸದಸ್ಯರು ನಗರಪಾಲಿಕೆಯಲ್ಲಿದ್ದಾರೆ.

ಅಧ್ಯಕ್ಷರು.—ನೀವು ನೋಟೀಸ್‌ನಲ್ಲಿ ಅದನ್ನು ಹೇಳಿಲ್ಲ. ನೋಟೀಸ್‌ನಲ್ಲಿ ಹೇಳಿರುವುದನ್ನು ಮಾತ್ರ ಹೇಳಿ.

ಶ್ರೀ ಕೆ. ಶಿವಮೂರ್ತಿ.—ಮುಂಜಾನೆ ಪತ್ರಿಕೆಯಲ್ಲಿ ಬಂದಿದೆ. ಒತ್ತಾಯ ತಂದಿರುವ ಕ್ಯಾಬಿನೆಟ್ ದರ್ಜೆ ಸಚಿವರು ಯಾರು ? ಕ್ಲಬ್ ನಡೆಸುತ್ತಿರುವವರು ಯಾರು ? ಬ್ಲೂ ಫಿಲಂ, ಅಶ್ಲೀಲ ಸಾಹಿತ್ಯದ ಟೇಪ್‌ರೆಕಾರ್ಡರ್, ವಿದೇಶಿ ಮದ್ಯದ ಬಾಟಲ್‌ಗಳು ಎಲ್ಲಿ ಹೋಯಿತು ? ಸರ್ಕಾರ ಇದರ ಬಗ್ಗೆ ವಿವರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ವಿ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಈಗ ವಿಷಯ ಹೇಳಿದ್ದಾರೆ. ನಾನು ಪೋಲೀಸರಿಂದ ವರದಿ ತರಿಸುತ್ತೇನೆ. ನಂತರ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

(vii) Incident took place at Hosur Border due to language issue

ಶ್ರೀ ಎಂ. ವೀರಪ್ಪ ಮೊಯಿಲಿ.— (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ.. ...

Mr. SPEAKER.—Trafic has been cleared ಎಂದು ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿನ್ನೆ ಹೊಸೂರು ಗಡಿಯಲ್ಲಿ ಏನು ಕೆಲವು ಘಟನೆಗಳು ನಡೆದಿವೆ ಅಂಥ ಘಟನೆಗಳು ಯಾವತ್ತೂ ನಮ್ಮ ಕರ್ನಾಟಕ ಅಥವಾ ದಕ್ಷಿಣ ಭಾರತದಲ್ಲಿ ನಡೆದಿಲ್ಲ. ಸುಮಾರು ಮುಂದಿ.....

Mr. SPEAKER.—If peace is restorted, does it warrant discussion ?

SRI. M. VEERAPPA MOILY.—Acrding to the information which came to me, tension is still prevailing. ಏತಕೆಂದರೆ ಈ ವಿಚಾರ ತಮಿಳು ನಾಡು ಅಸೆಂಬ್ಲಿಯಲ್ಲಿ ಕೂಡ ಬಂದಿದೆ. ಈಗ ಏನಾಗಿದೆಯೆಂದರೆ ಪರಸ್ಪರ ಎರಡು ರಾಜ್ಯಗಳ ಮಧ್ಯೆ ಒಂದು ರೀತಿಯ ಸಂಶಯ ಭಾವನೆಗಳ ಬಗ್ಗೆ ಏರ್ಪಟ್ಟಿದೆ. ನಗರದಲ್ಲಿ ಒಂದು ಕಾರನ್ನು ಕೂಡ wap laid ಮಾಡಿದ್ದಾರೆ. ೬೦ ಲಾರಿಗಳನ್ನು ಡ್ಯಾಮೇಜ್ ಮಾಡಿದ್ದಾರೆ ಎಂದು ವರದಿ ಇದೆ. ನಾನು ಇದರ ಬಗ್ಗೆ ವಿಸ್ತಾರವಾಗಿ ಹೇಳುವುದಿಲ್ಲ. ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ನಾವು